# ಅಳುವ ಕಂದಮ್ಮಗಳ ಇರುಳೇ



ಅಳುವ ಕಂದಮ್ಮಗಳ ಇರುಳೇ,
ಮರಣದಂಡನೆಯ ಬರೆಗುರುತು ಪಡಕೊಂಡ
ಪುಟ್ಟಮಕ್ಕಳ ಇರುಳೇ!
ಇಲ್ಲಿ ನಿದ್ದೆಗೆ ಪ್ರವೇಶವಿಲ್ಲ.
ಇಲ್ಲಿ ಅಮ್ಮಂದಿರ ಜಾಗವನ್ನು
ದುಷ್ಟದಾದಿಯರು ಆಕ್ರಮಿಸಿದ್ದಾರೆ,
ನಖಗಳನ್ನು ಹರಿತ ಮಾಡಿಕೊಂಡಿದ್ದಾರೆ,
ಭಯ ಸಾವಿನ ಭಯ.
ಅದನ್ನೇ ಬಿತ್ತಿದ್ದಾರೆ, ಗೋಡೆಗಳಲ್ಲಿ ಮತ್ತು ತೊಲೆಗಳಲ್ಲಿ.
ಭಯದ ಗೂಡುಗಳಲ್ಲಿ ಕಾವು ಪಡೆಯುತ್ತಿದೆ ಸಾವಿನ ಮೊಟ್ಟೆ.
ಈ ಪುಟ್ಟ ಮಕ್ಕಳಿಗೆ ತಾಯಿಹಾಲಿನ ಬದಲು
ಗುಟುಕು ಭಯ ಗುಟುಕು ಆತಂಕ...

ನಿನ್ನೆ ಇನ್ನೂ ನಿನ್ನೆ...
ಈ ಮಕ್ಕಳ ತಾಯಂದಿರು ಚಂದಮಾಮನ ತೋರಿಸುತ್ತ
ಕರೆದೊಯ್ಯುತ್ತಿದ್ದರು ನಿದ್ದೆಲೋಕದೊಳಗೆ...
ಮುತ್ತಿನ ಮಳೆಯಿಂದ ಒರಟಾದ ಗೊಂಬೆ ಬಲದ ತೋಳಿನಲ್ಲಿ
ಪ್ರೀತಿಯಿಂದಲೇ ಜೀವಂತವಾದ ಬಟ್ಟೆತುಂಬಿದ ಕೂಸು ಎಡತೋಳಿನಲ್ಲಿ...
ಈಗ ಬೀಸುತ್ತಿದೆ ಸಾವಿನ ಗಾಳಿ...
ಇನ್ನೆಂದೂ ಯಾರೂ ಎಣ್ಣೆಹಚ್ಚಿ ಬಾಚದಂಥ
ಒಣಕಲು ತಲೆಗೂದಲ ಮೇಲೆ.
(ಜರ್ಮನ್‌ನಿಂದ ಇಂಗ್ಲಿಷ್‌ಗೆ: ಮೈಕೆಲ್ ಹ್ಯಾಂಬರ್ಗರ್)

**● ನೆಲ್ಲಿ ಸ್ಯಾಕ್ಸ್**

**ನೆಲ್ಲಿ ಸ್ಯಾಕ್ಸ್** Nelly Sachs (1891–1970)

ಜರ್ಮನಿಯ ಪ್ರಸಿದ್ಧ ಕವಿ, ನಾಟಕಕಾರ್ತಿ. ಇವರು ಶ್ರೀಮಂತ ಯೆಹೂದೀ ಕುಟುಂಬದಲ್ಲಿ ಹುಟ್ಟಿದವರು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಹಿಟ್ಲರ್‌ನ ನರಮೇಧದಿಂದ ತಪ್ಪಿಸಿಕೊಂಡು ಸ್ವೀಡನ್‌ಗೆ ಹೋದರು. ಕೆಲವು ವರ್ಷಗಳ ನಂತರ ಸ್ವೀಡನ್‌ನ ಪೌರತ್ವವನ್ನು ಪಡೆದುಕೊಂಡು ಅಲ್ಲಿಯೇ ನೆಲೆಸಿದರು. ಜರ್ಮನ್ ಭಾಷೆಯಲ್ಲಿ ಅನೇಕ ನಾಟಕಗಳು ಮತ್ತು ಕವನ ಸಂಕಲನಗಳನ್ನು ಪ್ರಕಟಿಸಿದರು. 1960ರಲ್ಲಿ ಇವರಿಗೆ ನೊಬೆಲ್ ಪ್ರಶಸ್ತಿ ಸಂದಿದೆ.

**ತೇಜಶ್ರೀ**

ಕವಯಿತ್ರಿ, ಅನುವಾದಕಿ ತೇಜಶ್ರೀ ಹಾಸನದಲ್ಲಿ ನೆಲೆಸಿದ್ದಾರೆ. ‘ಲಯ’, ‘ತಿಳಿಗೊಳ’, ‘ಉಸ್ರುಬಂಡೆ’, ‘ಮಾಗಿ ಕಾಲದ ಸಾಲುಗಳು’, ‘ಅವನರಿವಲ್ಲಿ’ ಅವರ ಕವನ ಸಂಗ್ರಹಗಳಾಗಿವೆ.